ದಿಃ 24-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು : ಪ್ರತಿವಾದಿಗಳ ಪರ ಶ್ರೀ. ಕೆ.ಬಿ.ಜಿ ವಕೀಲರಿಂದಃ

7 ಎಕರೆ 18 ಗುಂಟೆಯ ಪೈಕಿ ದಕ್ಷಿಣದ ಕಡೆಗೆ 2 ಎಕರೆ 19 ಗುಂಟೆ ಜಮೀನನ್ನು ನನ್ನ ತಾತ ಖರೀದಿ ಮಾಡಿರುತ್ತಾರೆ. ಸದರಿ 2 ಎಕರೆ 19 ಗುಂಟೆಯ ಚೆಕ್ಕುಬಂದಿ ಪೂರ್ವಕ್ಕೆ ಹನುಮಂತರಾಯಪ್ಪನ ಜಮೀನು, ಪಶ್ಚಿಮಕ್ಕೆ ಲಕ್ಷ್ಮೀಪತಿ ಮತ್ತು ದಕ್ಷಿಣಕ್ಕೆ ನಂಜುಂಡಪ್ಪ ರವರ ಜಮೀನು ಇರುತ್ತದೆ. ವಾದಿಗಳು ದಾವಾ ಆಸ್ತಿಯ ಸ್ವಾಧೀನದಲ್ಲಿದ್ದಾರೆ ಎಂದು ನಾನು ದಾಖಲೆಗಳನ್ನು ನೋಡಿಲ್ಲ. ಸಾಕ್ಷಿ ಮುಂದುವರೆದು ತಾನು ಖುದ್ದಾಗಿ ಸ್ವಾಧೀನಲ್ಲಿರುವುದನ್ನು ನೋಡಿರುವುದಾಗಿ ನುಡಿಯುತ್ತಾರೆ. ದಾವಾ ಆಸ್ತಿಯ ಪ್ರಸ್ತುತ ವರ್ಷದ ಪಹಣಿಯನ್ನು ನಾನು ನೋಡಿಲ್ಲ. ಸರ್ವೆ ನಂಬರ್ 161 ಒಟ್ಟು 4 ಪೋಡಿಗಳಾಗಿವೆ. ನಮ್ಮ ಆಸ್ತಿ 3 ನೇ ಪೋಡಿನಲ್ಲಿದೆ. ದಾವಾ ಆಸ್ತಿಯ ಪಹಣಿಯು 2 ನೇ ಪ್ರತಿವಾದಿಯ ಹೆಸರಿನಲ್ಲಿ ಬರುತ್ತಿದೆ ಎಂದರೆ ಗೊತ್ತಿಲ್ಲ. ವಾದಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಪ್ರ.ಸಿ.ನ್ಯಾ ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು